# ಆಡಳಿತಾಧಿಕಾರಿಗಳು
# ಪದನಿಮಿತ್ತ ಪುನರ್ವಸತಿ ಅಧಿಕಾರಿಗಳು,
# ಕೃಷ್ಣಾ ಮೇಲ್ದಂಡೆ ಯೋಜನೆ, ನಾರಾಯಣಪೂರ

ದೇವದುರ್ಗ ತಾಲೂಕಿನ ಗೂಗಲ್ ಗ್ರಾಮದ ಕೆಲವು ಜಮೀನುಗಳು ನಾಬದಂ ವಿತರಣಾ ಕಾಲುವೆ ಸಂ.16ರ ಬಿಡಿ–1 ರ ಎಸ್.ಬಿ.ಡಿ. ಸಂಖ್ಯೆ.2ರ ಲ್ಯಾ.ಸಂ.2ರ ನಿರ್ಮಾಣಕ್ಕಾಗಿ ಭೂಸ್ವಾಧೀನ–2013 ಕಲಂ 16(2) ಅನ್ವಯ

ಪುನರ್ವಸತಿ ಹಾಗೂ ಪುನರ್ವ್ಯವಸ್ಥೆಯ ಕರಡು ಯಾದಿ.

**ಕರ್ನಾಟಕ ಸರಕಾರ**

**ಕೃಷ್ಣಾ ಮೇಲ್ದಂಡೆ ಯೋಜನೆ**

ಸಂಖ್ಯೆ:ಪುಅನಾ/ಅರ್‌ಆರ್‌ಎಪಿ/ ಗೂಗಲ್ /ಸಿಆರ್-04/2016-17 ದಿನಾಂಕ: 16.08.2016

**ದೇವದುರ್ಗ ತಾಲೂಕಿನ ಗೂಗಲ್ ಗ್ರಾಮದ ಕೆಲವು ಜಮೀನುಗಳು ನಾಬದಂ ವಿತರಣಾ ಕಾಲುವೆ ಸಂ.16ರ ಬಿಡಿ-1 ರ ಎಸ್.ಬಿ.ಡಿ. ಸಂಖ್ಯೆ.2ರ ಲ್ಯಾ.ಸಂ.2ರ ನಿರ್ಮಾಣಕ್ಕಾಗಿ** ಜಮೀನುಗಳನ್ನು ಭೂಸ್ವಾಧೀನ ಪಡಿಸಿಕೊಳ್ಳುತ್ತಿದ್ದು ಜಮೀನುಗಳ ಮಾಲೀಕರಿಗಾಗಿ ಪುನರ್ ವಸತಿ ಹಾಗೂ ಪುನರ್ ವ್ಯವಸ್ಥೆಯ "ನ್ಯಾಯೋಚಿತ ಪರಿಹಾರಕ್ಕೆ ಹಕ್ಕು ಮತ್ತು ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಪುನರ್ ವಸತಿ ಮತ್ತು ಪುನರ್ ವ್ಯವಸ್ಥೆ ಅಧಿನಿಯಮ 2013" (The Right to Fair Compensation And Transparency in Land Acquisition Rehabilitation and Resettlement Act – 2013)

ಕಲಂ 16(2) ರನ್ವಯ ಪುನರ್ ವಸತಿ ಹಾಗೂ ಪುನರ್ ವ್ಯವಸ್ಥೆಯ ಕರಡು ಯಾದಿ.

**ಜಿಲ್ಲೆ: ರಾಯಚೂರು** **ತಾಲ್ಲೂಕ: ದೇವದುರ್ಗ** **ಹೋಬಳಿ: ಗಬ್ಬೂರು** **ಗ್ರಾಮ:** ಗೂಗಲ್

**ಪ್ರಸ್ತಾವನೆ**

1) ಭೂಸ್ವಾಧೀನಕ್ಕೆ ಒಳಪಡುವ ಜಮೀನುಗಳ ಮಾಲೀಕರಿಗೆ ಪುನರ್ ವಸತಿ ಮತ್ತು ಪುನರ್ ವ್ಯವಸ್ಥೆಯ ಕರಡು ಪರಿ ಯೋಜನೆ ಕುರಿತು ನಿಯಮಗಳಲ್ಲಿ ಉಪಬಂಧಿಸುವ ರೀತಿಗಳಲ್ಲಿ ಅರಿವು ಮೂಡಿಸಲಾಗಿದೆ.

2) ನ್ಯಾಯೋಚಿತ ಪರಿಹಾರಕ್ಕೆ ಹಕ್ಕು ಮತ್ತು ಭೂ ಸ್ವಾಧೀನ ಪ್ರಕ್ರೀಯೆಯಲ್ಲಿ ಪಾರದರ್ಶಕತೆ ಪುನರ್ ವಸತಿ ಮತ್ತು ಪುನರ್ ವ್ಯವಸ್ಥೆ ಅಧಿನಿಯಮ -2013 ರನ್ವಯ ಕಲಂ.11(1)ರಡಿ (LAQ/SR/32/2015-16) ಗುರುವಾರ 17ನೇ ಡಿಸೆಂಬರ 2015ರಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಅಧಿಕೃತವಾಗಿ ಪ್ರಕಟಿಸಲಾಗಿರುತ್ತದೆ.

3) ಪುನರ್ ವಸತಿ, ಪುನರ್ ವ್ಯವಸ್ಥೆಯ ಈ ಕರಡು ಯಾದಿಯನ್ನು ಕಲಂ.11(1) ರ ಅಧಿಸೂಚನೆಯ ಪ್ರಕಟಣೆಯನ್ನು, ಸಂಯುಕ್ತ ಮೋಜನಿ ಸರ್ವೆ, ಗಣತಿ ಸಮೀಕ್ಷಾ ವರದಿ ಆಧಾರವಾಗಿ ಇಟ್ಟುಕೊಂಡು ತಯಾರಿಸಲಾಗಿದೆ.

4) **ಗೂಗಲ್** ಗ್ರಾಮಗಳ ಜಮೀನುಗಳಲ್ಲಿ ಭೂಸ್ವಾಧೀನಕ್ಕೆ ಒಳಪಡುವ ಕ್ಷೇತ್ರದಲ್ಲಿ ಸಾರ್ವಜನಿಕ ಮತ್ತು ಸರಕಾರಿ ಕಟ್ಟಡಗಳು ಇರುವದಿಲ್ಲ.

5) ಈ ಕರಡು ಯಾದಿಯು RTFCTLARR Act- 2013 ಕಲಂ.16, 16 (4), 16(5)ರನ್ವಯ ಕ್ಲೇಮು ಹಾಗೂ ಆಕ್ಷೇಪಣೆಗಳ ಕುರಿತು ಸಾರ್ವಜನಿಕ ಅಹವಾಲು ಸ್ವೀಕಾರ ಕಾರ್ಯಕ್ರಮಗಳನ್ನು ಏರ್ಪಡಿಸಿ ಸಂದರ್ಭಾನುಸಾರ ಬದಲಾವಣೆಗೆ ಒಳಪಡುತ್ತದೆ.

6) **ದೇವದುರ್ಗ ತಾಲೂಕಿನ ಗೂಗಲ್ ಗ್ರಾಮದ ಕೆಲವು ಜಮೀನುಗಳು ನಾಬದಂ ವಿತರಣಾ ಕಾಲುವೆ ಸಂ.16ರ ಬಿಡಿ-1 ರ ಎಸ್.ಬಿ.ಡಿ. ಸಂಖ್ಯೆ.2ರ ಲ್ಯಾ.ಸಂ.2ರ ನಿರ್ಮಾಣಕ್ಕಾಗಿ** ಜಮೀನುಗಳನ್ನು ನ್ಯಾಯೋಚಿತ ಪರಿಹಾರಕ್ಕೆ ಹಕ್ಕು ಮತ್ತು ಭೂಸ್ವಾಧೀನ ಪ್ರಕ್ರೀಯೆಯಲ್ಲಿ ಪಾರದರ್ಶಕತೆ, ಪುನರ್ ವಸತಿ ಮತ್ತು ಪುನರ್ ವ್ಯವಸ್ಥೆ ಅಧಿನಿಯಮ-2013 (The Right to Fair Compensation and Transparency in Land Acquisition, Rehabilitation and Resettlement Act, 2013) ಸದರಿ ಅಧಿನಿಯಮದ "ಅನುಸೂಚಿ- 2" ರ ಅನುಸಾರ ಹಾಗೂ ಕಲಂ.31 ರ ರನ್ವಯ ಪುನರ್ ವಸತಿ ಹಾಗೂ ಪುನರ್ ವ್ಯವಸ್ಥೆಯ ಕುರಿತು ಭೂಸ್ವಾಧೀನ ಕಾಯ್ದೆ-2013 ರ ನಿಯಮಾನುಸಾರ ಕ್ರಮ ಕೈಕೊಳ್ಳಲಾಗುವುದು.

7) **ಗೂಗಲ್** ಗ್ರಾಮಗಳ ಸದರಿ ಪ್ರಕರಣವು, RTFCTLARR Act -2013, ರನ್ವಯ ಕಲಂ.11(1)ರ ಅಧಿಸೂಚನೆ ಪ್ರಕಾರ ಭೂ ಸ್ವಾಧೀನಕ್ಕೆ ಒಳಪಡುವ ಕ್ಷೇತ್ರವು 100 ಎಕರೆಗಿಂತ ಕಡಿಮೆ ಇರುವುದರಿಂದ ಹೊಸ ಭೂಸ್ವಾಧೀನ ಕಾಯ್ದೆಯ ಕಲಂ.45 ರ ನಿಬಂಧನೆಗಳು ಅನ್ವಯಿಸುದಿಲ್ಲ.

8) ಸರಕಾರವು ಕಾಲ ಕಾಲಕ್ಕೆ ಹೊರಡಿಸುವ ಭೂಸ್ವಾಧೀನ ಕಾಯ್ದೆ, ಕಾನೂನು ನಿಯಮಗಳ ಅನ್ವಯ ಸದರಿ ಕರಡು ಯಾದಿಯು ಬದಲಾವಣೆಗೆ ಒಳಪಡುತ್ತದೆ.

9) ಭೂಸ್ವಾಧೀನಕ್ಕೆ ಒಳಪಡುವ ಜಮೀನುಗಳು ವಹಿವಾಟುಗಳ ಪ್ರಕಾರ ಪೋಡಿಯಾಗಿದ್ದಲ್ಲಿ ಅಥವಾ ಪೋಡಿಯಾಗಬೇಕಾಗಿದ್ದಲ್ಲಿ ಸಂಬಂಧಪಟ್ಟ ದಾಖಲೆಗಳನ್ನು ಭೂ ಮಾಲೀಕರು ಸಾರ್ವಜನಿಕ ಅಹವಾಲು ಸ್ವೀಕಾರ ಕಾರ್ಯಕ್ರಮದಲ್ಲಿ ಹಾಜರುಪಡಿಸಬೇಕು.

10) ಕರಡು ಯಾದಿಯ ಕಾಲಂ 11 ರಲ್ಲಿ ಬಾಧಿತಗೊಳ್ಳುವ ಕುಟುಂಬಗಳ ಜಮೀನುಗಳು ಶೇಕಡ 50% ಗಿಂತ ಕಡಿಮೆ ಜಮೀನನ್ನು ಕಳೆದುಕೊಳ್ಳುತ್ತಿರುವುದರಿಂದ ಸದರಿ ಕುಟುಂಬಗಳ ಮುಖ್ಯ ಆಧಾರ ಜೀವನೋಪಾಯ (Primary source of livelihood)ಕ್ಕೆ ಯಾವುದೇ ಧಕ್ಕೆ ಉಂಟಾಗುವುದಿಲ್ಲ ಎಂದು ತೀರ್ಮಾನಿಸಲಾಗಿದೆ.

11) **ಗೂಗಲ್** ಗ್ರಾಮಗಳ ಸರ್ವೆ ನಂಬರಗಳಾದ: 57/2, 60/3, 60/3, 63/3, 67/3, 78/2, 78/2, 68/3 ಇರುತ್ತವೆ.

ಸದರಿ ಕುಟುಂಬಗಳ ಜೀವನೋಪಾಯದ ಮುಖ್ಯ ಆಧಾರ (Primary Source of Livelihood) ಕ್ಕೆ ಧಕ್ಕೆ ಉಂಟಾಗುವ ಕುರಿತು ಭೂಮಾಲೀಕರು ಒದಗಿಸುವ ಒಟ್ಟು ಕುಟುಂಬದ ಸದಸ್ಯರ ಹೆಸರಿನಲ್ಲಿರುವ ಜಮೀನುಗಳ ಭೂಹಿಡುವಳಿ ಪ್ರಮಾಣಪತ್ರ, ಒಟ್ಟು ಜಮೀನು ಇರುವ ಬಗ್ಗೆ ಘೋಷಿಸಿಕೊಂಡ ಶಪಥಪತ್ರ (ಅಫಿಡವಿಟ್) ಹಾಗೂ ವಾರ್ಷಿಕ ಆದಾಯದ ವಿವರಗಳನ್ನು ಪಡೆದು ತೀರ್ಮಾನಿಸಲಾಗುವುದು.